Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President



Rtn. Palaksha K.
Dist. Governor




Rtn. PHF. I. Narayana
Asst. Governor



Rtn. Koushik Yadiyal
Zonal Lieutenant



$40^{h}$ year of Service and Fellowship



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

Volume 40 Issue - 38 26th March 2026

## OFFICIAL VISIT OF ASSISTANT GOVERNOR

Time : 7.00 p.m.
Venue : Hotel Shivaprasad Grand, Kundapura

## ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ

ಇದೇ ತಿಂಗಳು ತಾರೀಕು 31 ಮಾರ್ಚ್ ರಂದು ನಮ್ಮ ಕ್ಲಬ್ಬಿಗೆ **Dist. Governor official Visit** ಇರುತ್ತದೆ. ನನ್ನ ಮಿತ್ರ ಅಧ್ಯಕ್ಷ ರೊ. ಸಚಿನ್ ನನ್ನಲ್ಲಿ ವಿಚಾರಿಸಿದ ಈ ವರ್ಷ ಗವರ್ನರ್ ಅವರ ಪರಿಚಯವನ್ನು ಯಾವ ರೀತಿ ವಿಶೇಷವಾಗಿ ಮಾಡಬಹುದು?. ಅಧ್ಯಕ್ಷರು ಹಾಗೆ ಕೇಳಲು ಹಲವು ಕಾರಣಗಳಿವೆ. ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಪ್ರಾರಂಭವಾದ ದಿನದಿಂದ ಇಂದಿನವರೆಗೂ ಗವರ್ನರ್ ಅಫೀಶಿಯಲ್ ವಿಸಿಟ್ ಯಾವಾಗಲೂ ವಿಶೇಷವಾಗಿರುತ್ತದೆ. ಎಲ್ಲೂ ನಿರ್ವಹಿಸದ ರೀತಿಯಲ್ಲಿ ಅಪೂರ್ವವಾಗಿ ಗವರ್ನರ್ ಅವರ ಮನಸ್ಸಿಗೆ ಮುದ ನೀಡುವಂತೆ ಅವರ ಪರಿಚಯವನ್ನಾಗಲಿ ನಮ್ಮ ವರ್ಷದ ರೋಟರಿ ಕಾರ್ಯ ಚಟುವಟಿಕೆಗಳ ವರದಿಯಾಗಲಿ ಒಂದು ದೃಶ್ಯ ಕಾವ್ಯದಂತೆ ಆಗಮಿಸಿದ ಅತಿಥಿಗಳ ಎದುರು ಮೂಡಿಸುತ್ತಿದ್ದೆವು. ಒಂದೊಂದು ವರ್ಷ ಒಂದೊಂದು ತರಹ ಅದನ್ನು ನಿರ್ವಹಿಸುವ ಖುಷಿ. ಆ ಕಾರ್ಯಕ್ರಮ ಮುಗಿದು ಒಂದು ವರ್ಷವಾದರೂ ಸಹ ನಾವು ಮೆಲುಕು ಹಾಕುತ್ತಲೇ ಇರುತ್ತೇವೆ. ಹಿಂದೆ ನಡೆದ ಭೂತದ ಕೋಲದ ಪ್ರಹಸನವೋ, ಯಕ್ಷಗಾನದ ಒಡ್ಡೋಲಗವೋ, ಜಾನಪದ ಗೀತೆಗಳ ಮಾದರಿಯಲ್ಲಿ, ನೃತ್ಯದ ಮುಖಾಂತರ, ಕಟ್ಟೆ ಪುರಾಣದ ಪ್ರಹಸನದ ತರಹ ವಿವಿಧ ರೀತಿಗಳಲ್ಲಿ ಡಿಸ್ಟಿಕ್ ಗವರ್ನರ್ ಅವರ ಪರಿಚಯ ಹಾಗೂ ಕಾರ್ಯಕ್ರಮವನ್ನು ನಿರ್ವಹಿಸಿರುವುದು ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣಕ್ಕೆ ಹೆಮ್ಮೆ ತರುವಂತದ್ದು. ಅಂತೆಯೇ ಈ ವರ್ಷದ ಈ ಕಾರ್ಯಕ್ರಮವನ್ನು ಅಷ್ಟೇ ಸುಂದರ ರೀತಿಯಲ್ಲಿ ನಡೆಸಬೇಕೆಂಬುದು ನಮ್ಮೆಲ್ಲರ ಆಶಯವಾಗಿದೆ. ಮಿತ್ರರೇ, ಈ ಕಾರ್ಯಕ್ರಮಕ್ಕೆ ಸರ್ವರೂ ತಮ್ಮ ಮನೆಯ ಕಾರ್ಯಕ್ರಮವೆಂಬಂತೆ ಪರಸ್ಪರ ಕೈಜೋಡಿಸಿ ಯಶಸ್ವಿಗೊಳಿಸಬೇಕಾಗಿ ಜಾಸ್ಮಿನ್ ಬಳಗದ ಪರವಾಗಿ ವಿನಂತಿಸಿಕೊಳ್ಳುತ್ತಿದ್ದೇನೆ.

**– ರೊ. ರಮಾನಂದ ಕಾರಂತ**

## ವಾರದ ಸಭೆಯ ವರದಿ




ತಾ 19 ಗುರುವಾರ ನಮ್ಮ ವಾರದ ಸಭೆಯು ಕ್ಲಬ್ ಅಸೆಂಬ್ಲಿಯಾಗಿದ್ದು ಅಂದಿನ ಸಭೆಯಲ್ಲಿ ಮುಂಬರುವ ರೋಟರಿ Dist. Governor official Visit ಯಾವ ರೀತಿ ನಡೆಸುವುದೆಂದು ಬಹು ಮುಖ್ಯ ವಿಚಾರಗಳೊಂದಿಗೆ ಚರ್ಚಿಸಲಾಯಿತು. ಆಗಮಿಸಿದ ಸರ್ವ ರೋಟರಿ ಸದಸ್ಯರನ್ನು ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ. ಶ್ರೀನಿವಾಸ ಶೆಟ್ ಪ್ರಾರ್ಥನೆಯನ್ನು ನಡೆಸಿಕೊಟ್ಟರು. ರೊ. ಸೀತಾರಾಮ ನಕ್ಕತ್ತಾಯ ವಾರದ ಚಿಂತನೆ ಮಂಡಿಸಿದರು. ರೊ. ಕೃಷ್ಣ ಕಾಂಚನ್ ರೋಟರಿ ಮಾಹಿತಿ ತಿಳಿಸಿದರು. ರೊ. ಶ್ರೀಧರ ಶೆಟ್ಟಿ, ರೊ. ಕೃಷ್ಣ ಕಾಂಚನ್, ರೊ. ಸೀತಾರಾಮ ನಕ್ಕತ್ತಾಯ, ರೊ . ಆಡಿ. ವಿಶ್ವೇಶ್ವರ, ರೊ . ಎ.ಖಿ. ಸುರೇಂದ್ರನಾಥ್, ರೊ. ವಿವಿಯನ್ ಕ್ರಾಸ್ತಾ, ರೊ. ಉತ್ತಮ್ ಕುಮಾರ್ ಶೆಟ್ಟಿ, ರೊ. ಜುಡಿತ್ ಮೆಂಡೋನ್ಸ , ರೊ. ಸುಮಾ ಪುತ್ರನ್ ಹಾಗೂ ರೊ. ಜಾನ್ಸನ್ ಅಲ್ಮೆಡಾ ಪಾಲ್ಗೊಂಡರು. ರೊ. ರಮಾನಂದ ಕಾರಂತ್ ಸಭೆಯ ಕೊನೆಯಲ್ಲಿ ಹಾಸ್ಯವನ್ನು ನಡೆಸಿಕೊಟ್ಟರು. ರೊ. ಜುಡಿತ್ ಮೆಂಡೋನ್ಸ ಧನ್ಯವಾದ ಅರ್ಪಿಸಿದರು.

**Let us always meet each other with smile for the smiles are the beginning of Love – Mother Theresa**

## ಮುಕ್ತಿಯ ಮಾರ್ಗದಲ್ಲಿ ಗುರುವಿನ ಪಾತ್ರ

ನವಜಾತ ಶಿಶುವಿಗೆ ಈ ವಿಸ್ಮಯ ವಿಶ್ವವು ಅಜ್ಞಾತ ಪ್ರದೇಶವಾಗಿರುವುದು. ಆ ಮಗುವು ತನ್ನ ಪರಿಶೋಧನೆಯನ್ನು ತಂದೆ, ತಾಯಿಯ, ಹಿರಿಯರ ಸಹಾಯದಿಂದ ಪ್ರಾರಂಭಿಸುತ್ತದೆ. ಅದೇ ಮಗು ಪ್ರಾಯಕ್ಕೆ ಬಂದಹಾಗೆ ತನ್ನ ಶೋಧನೆಯಲ್ಲಿ ಮುನ್ನಡೆಯುತ್ತಾ ಹೋದಂತೆ ನುರಿತ ಪ್ರಾಧ್ಯಾಪಕರಿಂದ ಮಾರ್ಗದರ್ಶನ ಪಡೆದು ವಿಜ್ಞಾನಿಯಾಗುತ್ತದೆ. ಕಣ್ಣಿಗೆ ಕಾಣುವ ಹೊರ ಪ್ರಪಂಚವೇ ಅಜ್ಞಾತ ವಿಸ್ಮಯವಾಗಿರಬೇಕಾದರೆ ಇನ್ನು ಇಂದ್ರಿಯಗಳಿಗೆ ಎಟುಕದ ಒಳಪ್ರಪಂಚ ಅಥವಾ ಆಧ್ಯಾತ್ಮ ವಿದ್ಯೆಗೆ ಅತ್ಯಂತ ಅನುಭವವುಳ್ಳ ಪರಿಪೂರ್ಣ ಗುರುಗಳ ಮಾರ್ಗದರ್ಶನ ಅತ್ಯವಶ್ಯಕ. ಇದನ್ನು ತಿಳಿಸುವ ಗುರುವು ಅದ್ಭುತ ವ್ಯಕ್ತಿಯೇ ಆಗಿರಬೇಕು. ಅವನು ಜ್ಞಾನಿಯಾಗಿರಬೇಕು. ಇಲ್ಲದಿದ್ದರೆ, ಈಜು ಬಾರದವನು ಇನ್ನೊಬ್ಬನಿಗೆ ಈಜು ಕಲಿಸತೊಡಗಿದರೆ ಹೇಗೆ ಇಬ್ಬರೂ ನೀರಿನಲ್ಲಿ ಮುಳುಗುವಂತೆ ಹಾಗಾಗುತ್ತದೆ. ಜ್ಞಾನಿಯ ಮಾರ್ಗದರ್ಶನವು ಯಾವಾಗಲೂ ಪರಿಪೂರ್ಣವಾಗಿರುತ್ತದೆ ಹಾಗೂ ಶಿಷ್ಯನನ್ನು ಎಂತಹ ಸಂಕಷ್ಟದಿಂದಲೂ ಕಾಪಾಡುತ್ತದೆ. ಇಂತಹ ಗುರುವನ್ನು ಗುರು ಸ್ತೋತ್ರದಲ್ಲಿ ಹೀಗೆ ವರ್ಣಿಸಲಾಗಿದೆ. "ಜ್ಞಾನದ ಅಂಧತ್ವ ವಿರುವವರ ಕಣ್ಣಿಗೆ ಜ್ಞಾನವೆಂಬ ಅಂಜನವನ್ನು ಹಚ್ಚಿ ಬೆಳಗಿಸುವ ಗುರುವಿಗೆ ನಾನು ನಮಿಸುತ್ತೇನೆ". ಗುರುವಿನ ಜವಾಬ್ದಾರಿಯು ನಮಗೆ ಪರಿಪೂರ್ಣವಾದ ಸತ್ಯವನ್ನು ತೋರಿಸುವುದೇ ಆಗಿದೆ. ನಮಗೆ ಬಂಧ ವಿಮೋಚನೆ ಮಾಡಿಸುವವರೇ ಗುರು ಎಂದು ಶಂಕರರು ಹೇಳಿದ್ದಾರೆ. ಇಂತಹ ಗುರುಗಳ ಒಂದು ದೃಷ್ಟಿಯಿಂದಲೇ ನಾವು ಎಲ್ಲ ಪ್ರಾಪಂಚಿಕ ಗುಲಾಮಗಿರಿಯಿಂದ ಬಿಡುಗಡೆ ಹೊಂದುತ್ತೇವೆ. ಈ ಗುರುಗಳೇ ಮಹಾಪುರುಷರು. ಬುದ್ಧ, ಶಂಕರಾಚಾರ್ಯರು, ರಾಮಕೃಷ್ಣ ಪರಮಹಂಸರು ತೋರಿದ ದಾರಿಯು ನಮಗೆ ಮುಂದಿನ ಶತಮಾನಗಳಲ್ಲೂ ಸಹಾಯ ಮಾಡಬಲ್ಲದು. ಈ ಮಹಾಪುರುಷರು ಆಗಾಗ ಭೂಮಿಯಲ್ಲಿ ಅವತರಿಸುವುದಿಲ್ಲ, ಆದರೆ ಅವತರಿಸಿದಾಗ ಎಲ್ಲವೂ ಶುದ್ಧ ಮತ್ತು ಸ್ಪಷ್ಟವಾಗುತ್ತವೆ. ಈ ಮಹಾಪುರುಷರು ಭೌತಿಕ ವಾಗಿ ನಮ್ಮ ಜೊತೆ ಇರದಿದ್ದರೂ ಅವರು ಬಿಟ್ಟುಹೋಗಿರುವ ತತ್ವಗಳ ಅಧ್ಯಯನದಿಂದ ನಮಗೆ ಅದೇ ವಾತಾವರಣದ ಅನುಭವವಾಗುವುದರಲ್ಲಿ ಸಂಶಯವಿಲ್ಲ. ಉಪನಿಷತ್ತುಗಳ ಅಧ್ಯಯನದಿಂದ ಅಂತಹ ಗುರುವಿನ ಸಾಮೀಪ್ಯ, ಸಾನ್ನಿಧ್ಯ ಸಾಧ್ಯವಾಗುತ್ತದೆ.

---

## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ

### ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು–131

### ಮಾಯೆ ಭಾಗ –5

**ಶುದ್ಧಾದ್ವಯಬ್ರಹ್ಮ ವಿಬೋಧ ನಾಶ್ಯಾ**
**ಸರ್ಪಭ್ರಮೋ ರಜ್ಜುವಿವೇಕತೋ ಯಥಾ।**
**ರಜಸ್ತಮಃಸತ್ವಮಿತಿ ಪ್ರಸಿದ್ಧಾ**
**ಗುಣಾಸ್ತದೀಯಾಃ ಪ್ರಥಿತೈಃ ಸ್ವಕಾರ್ಯೈಃ ॥110॥**

'ಇದು ಹಾವು' ಎಂಬ ಭ್ರಾಂತಿಯು 'ಇದು ಹಗ್ಗ' ಎಂಬ ವಿವೇಕದಿಂದ ಹೇಗೆ ನಾಶವಾಗುವುದೊ ಹಾಗೆ ಶುದ್ಧವೂ ಅದ್ವಿತೀಯವೂ ಆದ ಪರಬ್ರಹ್ಮದ ಜ್ಞಾನದಿಂದ ಈ ಮಾಯೆಯು ನಾಶವಾಗುವುದು. ಸತ್ವ ರಜಸ್ಸು ತಮಸ್ಸು ಎಂಬ ಆ ಮಾಯೆಯ ಸಂಬಂಧಿಗಳಾದ ಗುಣಗಳು ವ್ಯಕ್ತವಾಗಿರುವ ತಮ್ಮ ಕಾರ್ಯಗಳಿಂದಲೇ ಪ್ರಸಿದ್ಧ ವಾಗಿವೆ.

ಮಾಯೆಯು ತೊಂದರೆದಾಯಕವೂ, ಅರ್ಥಮಾಡಿಕೊಳ್ಳಲು ಕಷ್ಟಕರ ವಾದರೂ ನಾವು ಅದನ್ನು ನಾಶಗೊಳಿಸಬಹುದು. ಇದು ಬುದ್ಧನ ಹಾಗೂ ವೇದಾಂತದ ಧನಾತ್ಮಕ ಉಪದೇಶ ವಾಗಿದೆ. ಏಕಮೇವ ಶುದ್ಧಬ್ರಹ್ಮನ ಸಾಕ್ಷಾತ್ಕಾರ ದಿಂದ ಮಾಯೆಯನ್ನು ನಾಶ ಮಾಡಬಹುದು. ಶುದ್ಧ ಪ್ರಜ್ಞಾ ಸ್ವಭಾವದ ಬ್ರಹ್ಮನ ಅರಿವಾದ ಕ್ಷಣವೇ ಮಾಯೆ ಮರೆಯಾಗುವುದು. ಇದರ ಬಗ್ಗೆ ಶಂಕರರ ದೃಷ್ಟಾಂತ ಒಂದಿದೆ, ಹೇಗೆ ಹಾವು ಎಂಬ ತಪ್ಪು ತಿಳುವಳಿಕೆಯು (ಅಜ್ಞಾನ) ಹಗ್ಗ ಎಂದು ಅರಿಯುವ ವಿವೇಕದ ಮೂಲಕ ತೊಡೆದು ಹೋಗುವುದೋ ಹಾಗೆ ಅದ್ವಯ ಬ್ರಹ್ಮ ನ ಅರಿವಾದೊಡನೆ ಮಾಯೆಯ ನಾಶವಾಗು ತ್ತದೆ. ಹಾವು ಎಂದುಕೊಳ್ಳುವ ಭ್ರಾಂತಿಯು ನಾವು ಅದು ಹಾವಲ್ಲ, ಒಂದು ಸಾಮಾನ್ಯ ಹಗ್ಗದ ತುಂಡು ಎಂದು ವಿವೇಚಿಸಿದಾಗ ಹೊರಟು ಹೋಗುತ್ತದೆ. ನಾವದನ್ನು ತಪ್ಪಾಗಿ ಹಾವು ಎಂದು ಕೊಂಡೆವಷ್ಟೆ. ಇದೇ ರೀತಿ ನಾವು ನಮ್ಮ ಗೋಚರಕ್ಕೆ ಬರುವ ಇಂದ್ರಿಯ ಪ್ರಪಂಚವೇ ವಾಸ್ತವವೆಂದು ತಪ್ಪಾಗಿ ತಿಳಿದುಕೊಳ್ಳುತ್ತೇವೆ. ಈ ಅನರ್ಥಕ್ಕೆ ಮಾಯೆ ಎಂಬ ನಿಗೂಢ ಶಕ್ತಿಯೇ ಕಾರಣ. ಆದರೆ ನಾವು ಯಾವಾಗ ಇದರ ಶೋಧನೆ ಮಾಡಿ ವಿವೇಕ ಎಂಬ ಬೆಳಕನ್ನು ಮಾಯೆಯಿಂದುಂಟಾದ ಅನುಭವಗಳ ಮೇಲೆ ಚೆಲ್ಲಿದಾಗ ಪರಬ್ರಹ್ಮನ ಸಾಕ್ಷಾತ್ಕಾರ ವಾಗಿ ಮಾಯೆ ಕಣ್ಮರೆಯಾಗುತ್ತದೆ.

ಮಾಯೆಯು ರಜಸ್, ತಮಸ್ ಮತ್ತು ಸತ್ವ ಎಂಬ ಮೂರು ಗುಣಗಳಿಂದ ಆಗಿದೆ. ಶ್ಲೋಕ 108 ರಲ್ಲಿ ಹಿಂದೆ ಇದರ ಬಗ್ಗೆ ಹೇಳಿದೆ. ಈ ಪ್ರಪಂಚದ ವಾಸ್ತವಿಕ ಘಟನೆ ಗಳಿಗೆ ಈ ಮೂರು ಗುಣಗಳ ಉಪಸ್ಥಿತಿಯೇ ಕಾರಣ ಎನ್ನಬಹುದು. ಪರಿಣಾಮ ದಲ್ಲಿ ಏನಿದೆಯೋ ಅದು ಕಾರಣದಲ್ಲಿಯೂ ಅಂತರ್ಗತ ವಾಗಿರುತ್ತದೆ. ಸಾಂಖ್ಯ ಮತ್ತು ವೇದಾಂತ ದಲ್ಲಿ ಇದೊಂದು ಮುಖ್ಯ ವಾದ ತತ್ವ. ಇದನ್ನೇ ಸತ್ಕಾರ್ಯ ವಾದ, ಅಂದರೆ ಏನಾದರೂ ಒಂದು ಆಗಬೇಕಾದರೆ ಏನಾದರೂ ಆಗಿರಲೇಬೇಕು. ಏನೂ ಆಗದೇ ಮತ್ತೇನೋ ಒಂದು ಆಗಲಾರದು. ಅಂದರೆ ಪರಿಣಾಮವು ಕಾರಣದೊಳಗೇ ಅಡಗಿರುತ್ತದೆ. ಈ ತತ್ವ ದ ಆಧಾರದ ಮೇಲೆ ಸತ್ವ ರಜಸ್ ತಮಸ್ ಗಳು ಪರಿಣಾಮದಲ್ಲಿದ್ದರೆ, ಅವು ಕಾರಣದಲ್ಲಿಯೂ ಇರುತ್ತವೆ. ಆದರೆ ಕಾರಣದಲ್ಲಿ ಸಮತೋಲನ ಸ್ಥಿತಿಯಲ್ಲಿಯೂ ಪರಿಣಾಮದಲ್ಲಿ ಕದಡಿದ ಮತ್ತು ಮಿಶ್ರಿತ ಸ್ಥಿತಿ ಯಲ್ಲಿಯೂ ಇರುತ್ತದೆ.



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath 1995-96



Rtn. B. C. Somayaji 1997-98



Rtn. S. Subraya Halambi 1999-2000



Rtn. K. Seetharama Nackathaya 2001-02



Rtn. Dr. Umesh Puthran 2003-04



Rtn. A. Shantharam Pai 2005-06

ಈ ಹಿಂದೆ ಹೇಳಿದಂತೆ ಮಾಯೆಯು ಅಸ್ತಿತ್ವ ದ ಅಂಶ. ಅದು ಸಿದ್ಧಾಂತ ವಲ್ಲ. ನಾವು ಮಾಯೆಯೊಳಗೆ ಜೀವಿಸಿದ್ದೇವೆ, ಕಾರ್ಯ ನಿರ್ವಹಿಸುತ್ತೇವೆ, ನಾವು ಮಾಯೆಯ ಒಳಗೆ ಕಳ್ಳರೂ ಹೌದು, ಸಂತರೂ ಹೌದು. ಪ್ರತಿಯೊಂದೂ ಮಾಯೆಯೊಳಗೆ ನಡೆಯುತ್ತಾ ಇರುತ್ತದೆ. ರಾಮಕೃಷ್ಣ ಪರಮಹಂಸರ ಚರಿತ್ರೆಯಲ್ಲಿ ಮಾಯೆಗೆ ಎರಡು ಪರಿಮಾಣಗಳಿವೆ, ಅವುಗಳೆಂದರೆ ಅವಿದ್ಯಾ ಮಾಯೆ ಮತ್ತು ವಿದ್ಯಾಮಾಯೆ. ನಮ್ಮ ಹೃದಯವು ಅವಿದ್ಯಾಮಾಯೆಯ ಆಟದ ಮೈದಾನ ವಾದಾಗ ಅದು ನಮ್ಮನ್ನು ಕೀಳುಮಟ್ಟಕ್ಕೆ ದಬ್ಬುತ್ತದೆ, ಆದರೆ ವಿದ್ಯಾಮಾಯೆಯು ನಮ್ಮನ್ನು ಮೇಲಕ್ಕೆತ್ತುತ್ತದೆ. ಇದು ಜ್ಞಾನದ ಬೆಳಕನ್ನು ನೀಡುವ ಮಾಯೆ! ಇಲ್ಲಿ ಆಯ್ಕೆ ನಮ್ಮದು. ಪ್ರತಿಯೊಂದೂ ಮಾಯೆಯೊಳಗಿದ್ದರೂ ಅವಿದ್ಯೆ ಮತ್ತು ವಿದ್ಯೆ ಇವುಗಳಲ್ಲಿ ಒಂದರ ಆಯ್ಕೆ ನಮ್ಮದೇ. ನಾವು ವಿದ್ಯಾಮಾಯೆ ಯನ್ನು ಆಯ್ದುಕೊಂಡರೆ, ನಮ್ಮ ಜೀವನ ಉನ್ನತವಾಗುತ್ತದೆ, ನಾವು ಸನ್ನಡತೆಯುಳ್ಳ ವರೂ, ಸಮಚಿತ್ತರೂ ಆಗುತ್ತೇವೆ. ಅಲ್ಲಿಂದ ಮುಂದೆ ನಮ್ಮ ಅಧ್ಯಾತ್ಮ ಔನ್ನತ್ಯ ಪ್ರಾರಂಭವಾಗುತ್ತದೆ. ಆದರೆ ನಾವು ಯಾವಾಗ ಮಾಯೆಯನ್ನು ಲಘುವಾಗಿ ತೆಗೆದುಕೊಂಡು ಅದರಿಂದ ಬಿಡಿಸಿ ಕೊಳ್ಳಲು ಹೋರಾಡುವುದಿಲ್ಲವೋ ಆಗ ನಾವು ಪ್ರಾಣಿಗಳಂತೆ ಜೀವಿಸಲು ನಿಶ್ಚಯಿಸಿದೆವು ಎಂದೇ ಅರ್ಥ.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ ಮಧ್ಯಮಾಮ್। ಅಸ್ಮದಾಚಾರ್ಯ ಪರ್ಯಂತಾಮ್ ವಂದೇ ಗುರುಪರಂಪರಾಮ್॥

ಶ್ರೀ ಗುರುಚರಣಾರವಿಂದಾರ್ಪಣಮಸ್ತು... ಮುಂದುವರಿಯುವುದು.....

## ಹುಟ್ಟುಹಬ್ಬದ ಶುಭಾಶಯಗಳು



ರೊ. ಸುಪ್ರೀತ್ ಚಾತ್ರ

ದಿನಾಂಕ : ಮಾರ್ಚ್ 27

ಮೊಬೈಲ್ : 9611123935, 9449817835



ರೊ. ರಾಮ್‌ಪ್ರಸಾದ್ ಶೇಟ್

ದಿನಾಂಕ : ಏಪ್ರಿಲ್ 01

ಮೊಬೈಲ್ : 9845085699

**Franklin D. Roosevelt:**

**"The test of our progress is not whether we add more to the abundance of those who have much; it is whether we provide enough for those who have too little." - Reflects the Rotary focus on helping those less fortunate and promoting fairness and equity.**

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

Rtn. Seetharama Nackathaya

Mob. : 9448127912

For Private Circulation only

Email id – rotaryclub.kundapurasouth@gmail.com



Rtn. S. Sadananda Chatra 1996-97



Rtn. K. Suresh Kamath 1998-99



Rtn. S. Vijaya Shetty 2000-01



Rtn. U. S. Shenoy 2002-03



Rtn. Dr. B. V. Udupa 2004-05



Rtn. K. Shantharam Prabhu 2006-07



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25